**ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆ– ನಿವಾಸಿ ವ್ಯಕ್ತಿಗಳಿಗೆ ಸೌಲಭ್ಯ**

**ಭಾರತೀಯ ರಿಸರ್ವ್ ಬ್ಯಾಂಕು**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ 400001**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 37 ನವೆಂಬರ್ 1, 2002

ಗೆ,

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳು.

ಮಾನ್ಯರೇ,

**ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆ– ನಿವಾಸಿ ವ್ಯಕ್ತಿಗಳಿಗೆ ಸೌಲಭ್ಯ**

ಆರ್‌ಬಿಐ ಅಧಿಸೂಚನೆ ಸಂಖ್ಯೆ ಎಫ್‌ಇಎಂಎ.11/2000–ಆರ್‌ಬಿ, ದಿನಾಂಕ 3ನೇ ಮೇ 2000ದ ನಿಯಂತ್ರಣದ 3 (ಬಿ) ರ ಅನ್ವಯ ಒಟ್ಟು 2000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತದ ವಿದೇಶೀ ವಿನಿಮಯವನ್ನು ತಮ್ಮಲ್ಲೇ ಉಳಿಸಿಕೊಳ್ಳಲು ನಿವಾಸಿಗಳಿಗೆ ಅವಕಾಶ ನೀಡಿರುವುದು ಅಧಿಕೃತ ವ್ಯಾಪಾರಿಗಳಿಗೆ ತಿಳಿದೇ ಇದೆ. ಆದರೆ, ಕರೆನ್ಸಿ ನೋಟುಗಳ, ಬ್ಯಾಂಕ್ ನೋಟುಗಳ ಮತ್ತು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿರುವ ಅಂಥ ವಿದೇಶೀ ವಿನಿಮಯವನ್ನು;

- (ಎ) ಆತ ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವಾಗ ಭಾರತದಲ್ಲಿನ ಯಾವುದೇ ವ್ಯಾಪಾರದಿಂದ ಅಥವಾ ಭಾರತದಲ್ಲಿ ಮಾಡಿದ ಯಾವುದೇ ಕೆಲಸದಿಂದ ಉದ್ಭವಿಸಿದ್ದಲ್ಲದ ಯಾವುದೇ ಸೇವೆಗಾಗಿ ಹಣ ಸಂದಾಯದ ರೂಪದಲ್ಲಿ ಆರ್ಜಿಸಿರಬೇಕು; ಅಥವಾ
- (ಬಿ) ಆತ ತಾನು ನೀಡಿದ ಸೇವೆಗಾಗಿ ಅಥವಾ ಯಾವುದೇ ಕಾನೂನು ಬದ್ಧ ಬಾಧ್ಯತೆಯ ಒಡಂಬಡಿಕೆಯಲ್ಲಿ ಭಾರತದ ನಿವಾಸಿಯಲ್ಲದ ಮತ್ತು ಭಾರತಕ್ಕೆ ಭೇಟಿ ನೀಡಿರುವ ವ್ಯಕ್ತಿಯಿಂದ ಪರಿಶ್ರಮಧನವಾಗಿ ಅಥವಾ ಕೊಡುಗೆಯಾಗಿ ಆರ್ಜಿಸಿರಬೇಕು; ಅಥವಾ
- (ಸಿ) ಆತ, ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವಾಗ ಗೌರವಧನ ಅಥವಾ ಕೊಡುಗೆ ರೂಪದಲ್ಲಿ ಆರ್ಜಿಸಿರಬೇಕು; ಅಥವಾ
- (ಡಿ) ವಿದೇಶ ಪ್ರಯಾಣಕ್ಕಾಗಿ ಅಧಿಕೃತ ವ್ಯಕ್ತಿಯಿಂದ ಆತ ಆರ್ಜಿಸಿದ ವಿದೇಶೀ ವಿನಿಮಯದಲ್ಲಿ ಖರ್ಚು ಮಾಡದೆ ಉಳಿದಿರುವ ಹಣವನ್ನು ಅದು ಪ್ರತಿನಿಧಿಸಬೇಕು.

2. ಮತ್ತಷ್ಟು ಉದಾರೀಕರಣದ ಪ್ರಯತ್ನವಾಗಿ, ಭಾರತದ ನಿವಾಸಿಯಾಗಿರುವ ಒಬ್ಬ ವ್ಯಕ್ತಿಗೆ, ಮೇಲಿನ (ಎ) ಮತ್ತು (ಬಿ) ಬಾಬುಗಳಲ್ಲಿ ನಿರ್ದಿಷ್ಟಪಡಿಸಿರುವ ಮೂಲಗಳಿಂದ ಕರೆನ್ಸಿ ನೋಟುಗಳ, ಬ್ಯಾಂಕ್ ನೋಟುಗಳ ಮತ್ತು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿ ಆರ್ಜಿಸಿದ ವಿದೇಶೀ ವಿನಿಮಯದ ಪೈಕಿ ನಿವಾಸಿ ವಿದೇಶಿ ಕರೆನ್ಸಿ (ದೇಶೀಯ) ಖಾತೆ ಎಂಬ ಹೆಸರಿನ ಒಂದು ವಿದೇಶೀ ಕರೆನ್ಸಿ ಖಾತೆಯನ್ನು ಒಬ್ಬ ಅಧಿಕೃತ ವ್ಯಾಪಾರಿಯ ಬಳಿ ತೆರೆಯಲು, ಹೊಂದಿರಲು ಮತ್ತು ನಿರ್ವಹಿಸಲು ಅವಕಾಶ ನೀಡುವುದಕ್ಕೆ ನಿರ್ಧರಿಸಲಾಗಿದೆ. ಖಾತೆಗೆ ಖರ್ಚು ಹಾಕುವುದು ಪ್ರಸಕ್ತ ವಿದೇಶೀ ವಿನಿಮಯ ನಿಯಂತ್ರಣಗಳ ಅನುಸಾರವಾಗಿ ನಡೆಸುವ ಚಾಲ್ತಿ/ ಬಂಡವಾಳ ಖಾತೆ ವ್ಯವಹಾರಗಳಿಗೆ ಮಾಡುವ ಸಂದಾಯಕ್ಕಾಗಿ ಆಗಿರುತ್ತದೆ. ಖಾತೆಯನ್ನು ಚಾಲ್ತಿ ಖಾತೆಯ ರೂಪದಲ್ಲಿ ನಿರ್ವಹಿಸಲಾಗುವುದು ಮತ್ತು ಯಾವುದೇ ಬಡ್ಡಿ ದೊರೆಯುವುದಿಲ್ಲ. ಚೆಕ್ ಸೌಲಭ್ಯ ದೊರೆಯುತ್ತದೆ. ಖಾತೆಯಲ್ಲಿ ಹೊಂದಿರುವ ಶಿಲ್ಕುಗಳ ಮೇಲೆ ಯಾವುದೇ ಗರಿಷ್ಠ ಮಿತಿ ಇರುವುದಿಲ್ಲ.

3. ಆರ್‌ಎಫ್‌ಸಿ (ದೇಶೀಯ) ಖಾತೆಯನ್ನು ತೆರೆಯುವ ಸೌಲಭ್ಯವು ಹಾಲಿ ಇರುವ (1) ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 10/2000–ಆರ್‌ಬಿ ದಿನಾಂಕ 3ನೇ 2000 ರ ನಿಯಂತ್ರಣನದ ಅಡಿಯಲ್ಲಿ ಒದಗಿಸಿರುವ ಆರ್‌ಎಫ್‌ಸಿ ಸೌಲಭ್ಯ

ಮತ್ತು (2) ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 11/ಆರ್‌ಬಿ–2000, ದಿನಾಂಕ 3ನೇ ಮೇ 2000ದ 3ನೇ ನಿಯಂತ್ರಣದ ಅನ್ವಯ ದೊರೆಯುವ ನಗದು ರೂಪದಲ್ಲಿ ಮತ್ತು/ ಅಥವಾ ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿ 2000 ಅಮೇರಿಕಾ ಡಾಲರ್‌ವರೆಗಿನ ಅಥವಾ ಅದಕ್ಕೆ ಸಮಾನವಾದ ವಿದೇಶೀ ವಿನಿಮಯವನ್ನು ತಮ್ಮಲ್ಲೇ ಉಳಿಸಿಕೊಳ್ಳುವ ಸೌಲಭ್ಯಕ್ಕೆ ಹೆಚ್ಚಿಗೆಯಾಗಿರುತ್ತದೆ.

4. ಆರ್‌ಬಿಐ ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 10/ಆರ್‌ಬಿ–2000 ದಿನಾಂಕ 3ನೇ ಮೇ 2000 ಇದರ ಸಂಬಂಧಪಟ್ಟ ಉಪಬಂಧಗಳನ್ನು ತಿದ್ದುಪಡಿ ಮಾಡುವ ಅಧಿಸೂಚನೆಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುತ್ತಿದೆ.

5. ಭಾರತ ಸರ್ಕಾರವು ಅಧಿಸೂಚನೆಯನ್ನು ಹೊರಡಿಸುವ ನಿರೀಕ್ಷೆಯಲ್ಲಿ, ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆಯನ್ನು ತೆರೆಯುವುದಕ್ಕಾಗಿ ಅಧಿಕೃತ ವ್ಯಾಪಾರಿಗಳು ಸ್ವೀಕರಿಸಿದ ಮನವಿಗಳನ್ನು ಶಿಫಾರಸುಗಳೊಂದಿಗೆ ರಿಸರ್ವ್ ಬ್ಯಾಂಕ್‌ನ ಸಂಬಂಧಪಟ್ಟ ಪ್ರಾದೇಶಿಕ ಕಚೇರಿಗೆ ರವಾನಿಸತಕ್ಕದ್ದು. ಆದರೆ, ಈ ಖಾತೆಗಳನ್ನು ತೆರೆಯುವಾಗ, ಅಧಿಕೃತ ವ್ಯಾಪಾರಿಗಳು, ಯಾವುದೇ ಇತರ ದೇಶೀಯ ಖಾತೆಯನ್ನು ತೆರೆಯುವುದಕ್ಕೆ ಅನ್ವಯವಾಗುವಂತೆ " ನಿಮ್ಮ ಗ್ರಾಹಕನ ಬಗ್ಗೆ ತಿಳಿಯಿರಿ " ಮಾರ್ಗಸೂಚಿಗಳು ಸೇರಿದಂತೆ ಅದೇ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

6. ಈ ಸುತ್ತೋಲೆಯಲ್ಲಿನ ಅಂಶಗಳನ್ನು ಅಧಿಕೃತ ವ್ಯಾಪಾರಿಗಳು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

7. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, 1999ರ (1999ರ 42) ಪ್ರಕರಣ 10 (4) ಮತ್ತು ಪ್ರಕರಣ 11(1)ರ ಅಡಿಯಲ್ಲಿ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ,

ಗ್ರೇಸ್ ಕೋಶಿ
ಮುಖ್ಯ ಪ್ರಧಾನ ವ್ಯವಸ್ಥಾಪಕರು.